|| ಶ್ರೀವಾದಿರಾಜಗುರ್ವಂತರ್ಗ ಶ್ರೀಮಧ್ವಾಂತರ್ಗತ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ||

# ಶ್ರೀ ಶ್ರೀ ಪಾದರಾಜರ ಚರಿತ್ರೆ

ಚೆನ್ನಪಟ್ಟಣದ ತಾಲ್ಲೂಕಿಗೆ ಸೇರಿದ ಅಬ್ಬೂರು ಒಂದು ಚಿಕ್ಕ ಗ್ರಾಮ. ಕಣ್ವ ನದಿಯ ತೀರ. ಎಲ್ಲೆಲ್ಲಿ ನೋಡಿದರೂ ಹಸಿರಿನ ಸಂಪತ್ತು, ಬೆಳೆಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದವು. ಈ ಗ್ರಾಮದಲ್ಲಿ ಶೇಷಗಿರಿಯಪ್ಪ ಮತ್ತು ಗಿರಿಯಮ್ಮನೆಂಬ ದಂಪತಿಗಳಿದ್ದರು, ಅವರು ದೈವಭಕ್ತರು. ಇವರ ಭಕ್ತಿಗೆ ಪ್ರೀತನಾದ ಶ್ರೀ ಹರಿ ಅವರಿಗೆ ಒಬ್ಬ ಪುತ್ರರತ್ನವನ್ನು ದಯಪಾಲಿಸಿದನು. ಅವರಿಗೆ ಲಕ್ಷ್ಮೀನಾರಾಯಣ ಎಂದು ಹೆಸರಿಟ್ಟರು.

ಅವರ ಬಾಲಲೀಲೆಗಳನ್ನು ನೋಡಿ ತಂದೆ ತಾಯಿಗಳು ಸಂತೋಷ ಪಡುತ್ತಿದ್ದರು. ಲಕ್ಷ್ಮೀನಾರಾಯಣರಿಗೆ ಆರು ವರ್ಷಗಳು ತುಂಬಿದವು. ತಂದೆ ತಾಯಿಗಳು ಬಡವರು. ಬಡತನವೋ ಸಿರಿತನವೋ ಹರಿ ತಮ್ಮ ಪೂರ್ವ ಕರ್ಮಫಲಾನುಸಾರವಾಗಿ ಕೊಟ್ಟದ್ದನ್ನು ಅನುಭವಿಸಿ, ಎಲ್ಲವನ್ನೂ ಅವನಲ್ಲಿ ಸಮರ್ಪಣೆ ಮಾಡಬೇಕೆಂದು, ನಗುಮೊಗದಿಂದ ಅವರು ಜೀವನವನ್ನು ನಡೆಸುತ್ತಿದ್ದರು. ಅವರ ಮನೆಯಲ್ಲಿ ಕೆಲವು ಹಸುಗಳಿದ್ದವು. ಲಕ್ಷ್ಮೀನಾರಾಯಣರು ಅವುಗಳನ್ನು ಮೇಯಿಸುವದಕ್ಕಾಗಿ ಊರ ಹೊರಗಿನ ಕಾಡಿಗೆ ಇತರ ಬಾಲಕರೊಂದಿಗೆ ಹೋಗುತ್ತಿದ್ದರು. ಅವರದು ಒಳ್ಳೆಯ ಆಕೃತಿ. ತೇಜಃಪುಂಜ ಮುಖ. ಎಲ್ಲರಿಗೂ ಅವರು ಅಚ್ಚುಮೆಚ್ಚು. ದೈವಭಕ್ತಿಯು ಅವರ ದೇಹದ ನಾಡಿ ನಾಡಿಗಳಲೂತುಂಬಿ ತುಳುಕುತ್ತಿತ್ತು. ಇತರ ಬಾಲಕರು ಅವರನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಂಡಿದ್ದರು. ಲಕ್ಷ್ಮೀನಾರಾಯಣರು ಅಡವಿಯಲ್ಲಿ, ಆ ಬಾಲಕರನ್ನು ಸೇರಿಸಿಕೊಂಡು ದೇವಪೂಜಾದಿ ಆಟಗಳನ್ನು ಆಡುತ್ತಿದ್ದರು. ಶ್ರೀ ಹರಿಯೇ ಜಗತ್ತಿನ ಪ್ರಭುವೆಂದೂ, ಸರ್ವೋತ್ತಮನೆಂದೂ ಬೋಧಿಸುತ್ತಿದ್ದರು.

ಈ ಲಕ್ಷ್ಮೀನಾರಾಯಣರು ಸಾಕ್ಷಾತ್ ದೈವಾಂಶ ಸಂಭೂತರು. ಧೃವನು ಕೇವಲ ಐದು ವರ್ಷಗಳ ವಯಸ್ಸಿನಲ್ಲಿಯೇ ನಾರದರ ಉಪದೇಶಾಮೃತವನ್ನು ಸವಿದು. ಶ್ರೀ ಹರಿಯನ್ನು ಪತ್ಯಕ್ಷ ಕಂಡ ಪೂತಾತ್ಮರು. ಅಪೂರ್ವ ಜನ್ಮ ಸಂಸ್ಕಾರದಿಂದಲೇ ,ಈಗಲೂ ಲಕ್ಷ್ಮೀ ನಾರಾಯಣರು ಅತ್ಯಂತ ದೈವಭಕ್ತನಾಗಿದ್ದರು. ಆದುದರಿಂದಲೇ ಅಂತಹ ಉತ್ತಮ ಗುಣಗಳು ತುಂಬಿದ್ದವು. ಮನೆಯಲ್ಲಿಯೂ ಸಹ ಅವರು ಸಮಯ ದೊರೆತಾಗಲೆಲ್ಲಾ ದೇವರಿಗೆ ಸಂಬಂಧಿ ಸಿದ ಆಟಗಳನ್ನು ಆಡುತ್ತಾ .ಸ್ತೋತ್ರ ಮಂತ್ರಗಳನ್ನು ಕಲಿಯುತ್ತಾ, ತಂದೆಯಿಂದಲೋ ತಾಯಯಿಂದಲೋ ದೇವರ ಹಾಗೂ ಭಕ್ತರ ಕಥೆಗಳನ್ನು ಕೇಳಿ ತಿಳಿದುಕೊಳ್ಳುತ್ತಾ ಕಾಲಕಳೆಯುತ್ತಿದ್ದರು. ತನ್ನ ವಿನಯಾದಿ ಸದ್ಗುಣಗಳಿಂದಲೂ.ಮಾತಾಪಿತೃ ಶುಶ್ರೂಷೆಯಿಂದಲೂ ಎಲ್ಲರ ಕಣ್ಮಣಿಯಾಗಿದ್ದರು.

ಲಕ್ಷ್ಮೀನಾರಾಯಣರು ಒಂದು ದಿನ ಸಾಯಂಕಾಲ ಹಸುಗಳನ್ನು ಹೊಡೆದುಕೊಂಡು ಮನೆಯ ಕಡೆಗೆ ಹಿಂತಿರುಗುತ್ತಿದ್ದರು. ಅಷ್ಟರಲ್ಲಿ ದೂರದಲ್ಲಿ ಒಂದು ಮೇನೆಯನ್ನು ಹೊತ್ತುಕೊಂಡು ಕೆಲವರು ಬರುತ್ತಿದ್ದರು .ಬಾಲಕರೆಲ್ಲರೂ ಕುತೂಹಲಿಗಳಾಗಿ ನೋಡುತ್ತಾನಿಂತುಕೊಂಡರು. ಮೇನೆಯು ಹತ್ತಿರಕ್ಕೆ ಬುದಿತು. ಆದರಲ್ಲಿ ಕುಳಿತಿದ್ದ ಯತಿಗಳು ಪರದೆಯನ್ನು ಸರಿಸಿ, ಬಾಲಕರನ್ನು ನೋಡಿ ''ಇನ್ನೂ ಊರು ಎಷ್ಟು ದೂರವಿದೆಯಪ್ಪಾ ''? ಎಂದು ಕೇಳಿದರು. ಯಾರೂ ಉತ್ತರ ಕೊಡಲಿಲ್ಲ :ಆದರೆ ಲಕ್ಷ್ಮೀ ನಾರಾಯಣರು ಮಾತ್ರ ಮುಂದೆ ಬಂದು, ''ಸ್ವಾಮಿ,ಪಶ್ಚಿಮದಲ್ಲಿ ಸೂರ್ಯನನ್ನು ನೋಡಿ, ಬಾಲಕರಾದ ನಮ್ಮನ್ನು ನೋಡಿ, ಮನೆಯ ಹಾದಿ ಹಿಡಿದ ಹಸುಗಳನ್ನು ನೋಡಿ, ಪಾಜ್ಞರಿಗೆ ಊರು ಎಷ್ಟು ದೂರವಿನುವುದೆಂದು ಅರ್ಥವಾಗುವುದು, '' ಎಂದು ಜಾಣತನದಿಂದ ಉತ್ತರವಿತ್ತರು.

ಮೇನೆಯಲ್ಲಿ ಕುಳಿತಿದ್ದ ಯತಿಗಳಿಗೆ ಬಾಲಕನ ಉತ್ತರದಿಂದ ಆಶ್ಚರ್ಯ ಸಂತೋಷಗಳೆರಡೂ ಏಕಕಾಲದಲ್ಲಾದವು.

ಆಗ ಯತಿಗಳು ಬಾಲಕನನ್ನು ಕುರಿತು, ''ಮಗು ನಿನ್ನ ಹೆಸರೇನಪ್ಪ'' ? ಎಂದು ಕೇಳಿದರು.

ಮುಂದೆ ಆ ಯತಿಗಳಿಗೂ ಬಾಲಕನಿಗೂ ಕೆಳಗಿನಂತೆ ಪರಸ್ಪರ ಸಂಭಾಷಣೆ ನಡೆಯಿತು.

ಬಾಲಕ :-''ಲಕ್ಷ್ಮೀನಾರಾಯಣ ಎನ್ನುತ್ತಾರೆ''

ಸ್ವಾಮಿಗಳು : - ಮುದ್ದಾದ ಹೆಸರಪ್ಪ, ನಿಮ್ಮ ತಂದೆ ತಾಯಿಗಳ ಹೆಸರೇನು ?

ಲಕ್ಷ್ಮೀನಾರಾಯಣ : - ಶೇಷಗಿರಿಯಪ್ಪ; ಗಿರಿಯಮ್ಮ

ಸ್ವಾಮಿಗಳು : - ಏನು ಓದಿದ್ದೀ ಮಗು ನೀನು ?

ಲಕ್ಷ್ಮೀನಾರಾಯಣ :- ಮನೆಯಲ್ಲಿಯೇ ನಮ್ಮ ತಂದೆ ಸ್ವಲ್ಪ ಸಂಸ್ಕೃತ, ಕೆಲವು ಶ್ಲೋಕಗಳನ್ನೂ, ಮಂತ್ರಗಳನ್ನೂ ಹೇಳಿಕೊಟ್ಟಿದಾರೆ.

ಸ್ವಾಮಿಗಳು:- ಸಂತೋಷ ನೀನು ಬುದ್ಧಿವಂತ. ಶ್ರೀಹರಿಯ ಅನುಗ್ರಹವಾಗಲಿ ನಿನಗೆ.

ಹೀಗೆ ಹೇಳಿ ಸ್ವಾಮಿಗಳು ಲಕ್ಷ್ಮೀನಾರಾಯಣನನ್ನು ಹರಿಸಿದರು. ಮೇನೆ ಮುಂದಕ್ಕೆ ಹೋಯಿತು. ಬಾಲಕರು ಮನೆ ಸೇರಿದರು.

ಲಕ್ಷ್ಮೀನಾರಾಯಣನ ಜಾಣತನವನ್ನು ಮೆಚ್ಚಿದ ಸ್ವಾಮಿಗಳ ಹೆಸರು ಸ್ವರ್ಣವರ್ಣತೀರ್ಥರೆಂದು. ಅವರ ನಿಜವಾದ ಹೆಸರು ಪರಶುರಾಮತೀರ್ಥರೆಂದು. ಸಂತತ ಶ್ರೀಹರಿ ಚಿಂತನೆಯಲ್ಲಿಯೂ, ಜಪತಪಗಳಲ್ಲಿಯೂ ನಿರತರಾಗಿದ್ದುದರಿಂದ, ದಿನದಿನಕ್ಕೆ ಅವರ ಬ್ರಹ್ಮ ತೇಜಸ್ಸು ಅಭಿವೃದ್ಧಿಯಾಯಿತು. ಅವರ ದೇಹಕಾಂತಿ ಪುಟವಿಟ್ಟ ಬಂಗಾರದಂತೆ ಪ್ರಜ್ವಲಿಸಿತು. ಅವರ ದೇಹಕಾಂತಿಗೆ ಬೆರಗಾದ ಜನರು ಅವರನ್ನು ''ಸ್ವರ್ಣವರ್ಣತೀರ್ಥ''ರೆಂದು ಕರೆಯಲಾರಂಭಿಸಿದರು. ಇವರು ತ್ರಿಮತಾಚಾರ್ಯರಲ್ಲಿ ಒಬ್ಬರಾದ ಶ್ರೀ

ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಪದ್ಮನಾಭತೀರ್ಥರ ಪೀಳಿಗೆಯಲ್ಲಿ ಬಂದವರು . ತೀರ್ಥಯಾತ್ರೆಯನ್ನು ಮಾಡುತ್ತಾ ಅಬ್ಬೂರಿನಲ್ಲಿರುವ ಪುರುಷೋತ್ತಮತೀರ್ಥರೆಂಬ ಸನ್ಯಾಸಿಗಳನ್ನು ನೋಡಲು ಬಂದಿದ್ದರು.

ಸ್ವರ್ಣವರ್ಣ ತೀರ್ಥರು ರಾತ್ರಿಯಾಗುವುದಕ್ಕೆ ಮುಂಚೆಯೇ ಪುರುಷೋತ್ತಮತೀರ್ಥರ ಆಶ್ರಮವನ್ನು ಸೇರಿದರು. ಪುರುಷೋತ್ತಮತೀರ್ಥರು ಸ್ವರ್ಣವರ್ಣತೀರ್ಥರನ್ನು ಸಾದರವಾಗಿ ಆಹ್ವಾನಿಸಿದರು. ಉಭಯ ಯತಿಗಳ ಮಧ್ಯದಲ್ಲಿ ಬಹಳ ಸಮಯದವರೆಗೆ ಶ್ರೀಹರಿಯ ಮಹಾಮಹಿಮೆಯ ಬಗ್ಗೆ ಮಾತುಕತೆಗಳಾದವು. ಕೊನೆಗೆ ಸ್ವರ್ಣವರ್ಣತೀರ್ಥರು ಮಾರ್ಗದಲ್ಲಿ ತಮಗೂ ಲಕ್ಷ್ಮೀನಾರಾಯಣನಿಗೂ ಮಧ್ಯದಲ್ಲಿ ನಡೆದ ವೃತ್ತಾಂತವನ್ನು ತಿಳಿಸುತ್ತಾ ''ಆ ಬಾಲಕನು ಬಹು ಕುಶಾಗ್ರಮತಿಯಾಗಿದ್ದಾನೆ, ಅವನಿಂದ ಲೋಕಕಲ್ಯಾಣವಾಗಬೇಕಾಗಿದೆ, ಕಾರಣ ನೀವು ಹೇಗಾದರೂ ಮಾಡಿ ಅವನನ್ನು ನಮ್ಮ ಸಂಸ್ಥಾನಕ್ಕೆ ಉತ್ತರಾಧಿಕಾರಿಯನ್ನಾಗಿ ಕೊಡಿಸಿರಿ '' ಎಂದು ಹೇಳಿದರು, ಪರುಷೋತ್ತಮತೀರ್ಥರು, ''ಹಾಗೆಯೇ ಆಗಲಿ, ಶ್ರೀ ಹರಿಯ ಚಿತ್ತವಿದ್ದಲ್ಲಿ ಎಲ್ಲವೂ ಸುಗಮವಾಗಿ ನಡೆಯುತ್ತದೆ '' ಎಂದು ಹೇಳಿದರು.

ಮಾರನೆಯ ದಿನವೇ ಪುರುಷೋತ್ತಮತೀರ್ಥರು, ಶೇಷಗಿರಿಯಪ್ಪ ಗಿರಿಯಮ್ಮನವರಿಗೆ ಆಮಂತ್ರಣವನ್ನು ಕಳುಹಿಸಿ ಅವರನ್ನು ಕರೆಯಿಸಿದರು.

ದಂಪತಿಗಳು ಸಡಗರದಿಂದ ಮಗನೊಡನೆ ಬಂದು ಉಭಯ ಶ್ರೀಗಳವರಿಗೆ ನಮಸ್ಕರಿಸಿ ಕೈ ಜೋಡಿಸಿಕೊಂಡು ಭಕ್ತಿಯಿಂದ ಕುಳಿತರು.

ಪರುಷೋತ್ತಮತೀರ್ಥರು, ''ಶೇಷಗಿರಿಯಪ್ಪ ನೀವು ಬಹಳ ಅದೃಷ್ಟವಂತರು. ಶ್ರೀಹರಿ ನಿಮ್ಮ ಭಕ್ತಿಗೆ ಮೆಚ್ಚಿ ಲಕ್ಷ್ಮೀನಾರಾಯಣನಂತಹ ಪುತ್ರರತ್ನವನ್ನು ಕರುಣಿಸಿದ್ದಾನೆ. ಹುಡುಗ ಒಳ್ಳೆ ತೇಜಸ್ವಿಯಾಗಿದ್ದಾನೆ. ಅವನು ದನಗಳನ್ನು ಕಾಯಲು ಜನ್ಮವನ್ನೆತ್ತಿಲ್ಲ''ಎಂದರು.

ದಂಪತಿಗಳು ಯತಿಗಳ ಮಾತಿನ ಮರ್ಮವರಿಯದೆ ಮೌನ ವಹಿಸಿದರು.

ಯತಿಗಳೇ ಮಾತನ್ನು ಮುಂದುವರಿಸುತ್ತಾ, ''ಶೇಷಗಿರಿಯಪ್ಪ, ಮಗನ ಶ್ರೇಯಸ್ಸಿಗಾಗಿ ನೀವಿಬ್ಬರೂ ಸ್ವಲ್ಪ ತ್ಯಾಗಕ್ಕೆ ಸಿದ್ಧರಾಗಿರಬೇಕು, ಶ್ರೀಹರಿಪ್ರೀತನಾಗುತ್ತಾನೆ '' ಎಂದರು. ಆ ಮಾತಿಗೆ ಶೇಷಗಿರಿಯಪ್ಪ ವಿನಯದಿಂದ ''ಅಪ್ಪಣೆಯಾಗಬೇಕು ''ಎಂದನು.

ಆಗ ಪುರುಷೋತ್ತಮತೀರ್ಥರು, ''ಲಕ್ಷ್ಮೀನಾರಾಯಣನನ್ನು ಶ್ರೀ ಕೃಷ್ಣಾರ್ಪಣವೆಂದು ಹೇಳಿ ಈ ಸ್ವರ್ಣವರ್ಣತೀರ್ಥರಿಗೆ ದಾನ ಕೊಟ್ಟುಬಿಡಿ '' ಎಂದರು. ದಂಪತಿಗಳು ದಿಗ್ಭ್ರಾಂತರಾದರು. ಇದ್ದವನು ಒಬ್ಬನೇ ಮಗ. ತಮ್ಮ ಈ ಇಳಿವಯಸ್ಸಿನಲ್ಲಿ ಪ್ರಾಣಪ್ರಿಯನಾಗಿದ್ದ ಅವನನ್ನು ಹೇಗೆ ಅರ್ಪಿಸಬೇಕೆಂದು ತಿಳಿಯದವರಾಗಿ ಮೂಕರಂತೆ ಕುಳಿತುಬಿಟ್ಟರು. ದಂಪತಿಗಳ ಮೌನವನ್ನು ಕಂಡು ಪುರುಷೋತ್ತಮತೀರ್ಥರು, ''ಯೋಚಿಸಬೇಡಿ ಶೇಷಗಿರಿಯಪ್ಪ ತಾಯಿಯ ಹೃದಯವನ್ನೂ ನಾವು ಅರಿತಿದ್ದೇವೆ. ''

ಧರ್ಮ ಸಂರಕ್ಷಣೆಗಾಗಿ ಮುದ್ದಿನ ರಾಮಚಂದ್ರನನ್ನು ವಿಶ್ವಾಮಿತ್ರರಿಗೆ ಒಪ್ಪಿಸಿದ ದಶರಥನನ್ನೂ , ಕೌಸಲ್ಯೆಯನ್ನೂ ಜ್ಞಾಪಿಸಿಕೊಳ್ಳಿರಿ. ಅವರ ತ್ಯಾಗದಿಂದ ಲೋಕಕ್ಕೆ ಎಂತಹ ಕಲ್ಯಾಣವಾಯಿತು. ಲಕ್ಷ್ಮೀನಾರಾಯಣನ ಯತಿಶಿರೋಮಣಿಯಾಗುತ್ತಾನೆ, ಪ್ರಖ್ಯಾತನಾಗುತ್ತಾನೆ. ಅವನಿಂದ ಜಗತ್ತಿನಲ್ಲಿ ಧರ್ಮ ಸಂಸ್ಥಾಪನೆಯಾಗಬೇಕಾಗಿದೆ. ನೀವೂ ಮಗನನ್ನು ನೋಡುತ್ತಾ ಮಠದಲ್ಲೇ ಇರಬಹುದು '' ಎಂದು ಹೇಳಿದರು.

ಶ್ರೀಗಳವರ ಉತ್ತೇಜಾತ್ಮಕ ಮಾತುಗಳಿಂದ ಆ ದಂಪತಿಗಳ ಶರೀರದಲ್ಲಿ ಏನೋ ಒಂದು ವಿದ್ಯುತ್ ಸಂಚಾರವಾದಂತಾಯಿತು. ಸಾಕ್ಷಾತ್ ಶ್ರೀ ಹರಿಯೇ ಪುರುಷೋತ್ತಮತೀರ್ಥರಲ್ಲಿ ನಿಂತು ಮಾತನಾಡಿಸುತ್ತಿರುವನೋ ಎಂಬಂತೆ ಭಾಸವಾಯಿತು. ''ಶ್ರೀ ಹರಿಚಿತ್ತ, ಶ್ರೀಗಳ ಕೃಪೆಯಾಗಿರಲಿ. ಕೃಷ್ಣಾರ್ಪಣಮಸ್ತು ''ಎಂದು ಹೇಳಿ ಲಕ್ಷ್ಮೀನಾರಾಯಣನನ್ನು ಸ್ವರ್ಣವರ್ಣತೀರ್ಥರಿಗೆ ಅರ್ಪಿಸಿಬಿಟ್ಟರು. ಸ್ವರ್ಣವರ್ಣತೀರ್ಥರ ಕಣ್ಣುಗಳಲ್ಲಿ ಆನಂದಬಾಷ್ಪಗಳೂ ಧಾರಾಕಾರವಾಗಿ ಹರಿದುವು. ಕಣ್ಣುಗಳನ್ನು ಮುಚ್ಚಿಕೊಂಡು ಅಂತರ್ಮುಖಿಗಳಾಗಿ ಶ್ರೀಹರಿ ಗುರುಗಳನ್ನು ಹೃದಯಮಂದಿರದಲ್ಲಿ ಭಕ್ತಿಪೂರ್ವಕವಾಗಿ ಧ್ಯಾನಿಸಿದರು.

ಲಕ್ಷ್ಮೀನಾರಾಯಣರು ಸಂತೋಷದಿಂದಲೇ ಸ್ವಾಮಿಗಳ ಶಿಷ್ಯನಾದರು. ಪಾಠಪ್ರವಚನಗಳು ಮೊದಲಾದವು. ಅವನಿಗಿನ್ನೂ ಉಪನಯನವಾಗಿರಲಿಲ್ಲ .ಸ್ವರ್ಣವರ್ಣತೀರ್ಥರು ತಂದೆ- ತಾಯಿಗಳ ಕಡೆಯಿಂದ ಉಪನಯನವನ್ನು ವಿಜೃಂಭಣೆಯಿಂದ ಮಾಡಿಸಿದರು.

ಪಾಠಪ್ರವಚನಗಳಲ್ಲಿ ಲಕ್ಷ್ಮೀನಾರಾಯಣರು ಬಹಳ ಚುರುಕು. ಏಕಸಂಧಿ ಗ್ರಾಹಿಯಾಗಿದ್ದರು. ಅಂದರೆ ಒಂದು ಸಲ ಹೇಳಿದರೆ ಸಾಕು, ಎಂತಹಗಹನ ವಿಷಯಗಳನ್ನೂ ಗ್ರಹಿಸಿಬಿಡುತ್ತಿದ್ದರು. ಲಕ್ಷ್ಮೀನಾರಾಯಣನಿಗೆ ಗುರುಗಳೂ, ಯತಿಶ್ರೇಷ್ಠರೂ ಆಗಿದ್ದ ಸ್ವರ್ಣವರ್ಣತೀರ್ಥರಲ್ಲಿ ಆಗಾಧ ಭಕ್ತಿ ಗೌರವ.

ಲಕ್ಷ್ಮೀನಾರಾಯಣನ ಮುಖದಲ್ಲಿ ಬ್ರಹ್ಮವರ್ಚಸ್ಸು ತಾನೇ ತಾನಾಗಿ ಪ್ರಜ್ವಲಿಸುತ್ತಿತ್ತು. ಶಿಷ್ಯನನ್ನು ನೋಡಿದಷ್ಟೂ ಸ್ವರ್ಣವರ್ಣತೀರ್ಥರಿಗೆ ಹೆಚ್ಚು ಹೆಚ್ಚು ಆನಂದವಾಗುತ್ತಿತ್ತು. ತಮ್ಮ ಉತ್ತರಾಧಿಕಾರಿಯಾಗಲು ಲಕ್ಷ್ಮೀನಾರಾಯಣರು ಸರ್ವವಿಧದಲ್ಲಿಯೂ ಅರ್ಹನಾಗಿರುವನೆಂದು ತಿಳಿದು, ಶುಭಮುಹೂರ್ತದಲ್ಲಿ ವಿಧಿವತ್ತಾಗಿ ಯತ್ಯಾಶ್ರಮವನ್ನು ಕೊಟ್ಟು, ''ಲಕ್ಷ್ಮೀನಾರಾಯಣ ಮುನಿ''ಎಂದು ಆಶ್ರಮ ನಾಮವನ್ನು ಅನುಗ್ರಹಿಸಿದರು.

ಬಾಲಸನ್ಯಾಸಿಗಳ ಪ್ರತಿಭೆಯು ದಿನದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯಾಗತೊಡಗಿತು. ಸ್ವರ್ಣವರ್ಣತೀರ್ಥರು ಲಕ್ಷ್ಮೀನಾರಾಯಣ ಮುನಿಗಳನ್ನು ಪ್ರೌಢವಿದ್ಯಾಭ್ಯಾಸಕ್ಕಾಗಿ ಕಳುಹಿಸಬೇಕೆಂದು ಮನಸ್ಸುಮಾಡಿದರು. ಆಗಿನ ಪ್ರಸಿದ್ಧ ತಪಸ್ವಿಗಳೂ,ಅಸಾಧಾರಣಪಂಡಿತರೂ, ಯತಿಶ್ರೇಷ್ಠರೂ ಆಗಿದ್ದ ಶ್ರೀ ವಿಬುಧೇಂದ್ರತೀರ್ಥರ ಬಳಿಗೆ ಲಕ್ಷ್ಮೀನಾರಾಯಣ ಯತಿಗಳನ್ನು ಕಳುಹಿಸಿದರು.

ಶ್ರೀ ವಿಬುಧೇಂದ್ರತೀರ್ಥರಿಗೆ ಪರಮಾನಂದವಾಯಿತು .ಶಾಸ್ತ್ರಹೃದಯವನ್ನೆಲ್ಲಾ ಬೋಧಿಸಿದರು. ಗುರುಶಿಷ್ಯರ ಮಧ್ಯದಲ್ಲಿ ಅನ್ಯೋನ್ಯ ಪ್ರೀತಿಯು ಅಪಾರವಾಗಿ ಬೆಳೆಯಿತು.

ಶ್ರೀ ವಿಬುಧೇಂದ್ರರು ಶಿಷ್ಯರೊಡನೆ ಸಂಚಾರ ಕೈಗೊಂಡರು. ಕೊಪ್ರ ಎಂಬುದು ಒಂದು ಪ್ರಸಿದ್ಧವಾದ ಶ್ರೀ ನೃಸಿಂಹ ಕ್ಷೇತ್ರ. ಶ್ರೀ ವಿಬುಧೇಂದ್ರರು ಅಲ್ಲಿಗೆ ಬಂದು ಕೆಲವು ಕಾಲ ನೆಲಸಿದರು. ಇಷ್ಟುಹೊತ್ತಿಗಾಗಲೇ ಲಕ್ಷ್ಮೀನಾರಾಯಣ ಮುನಿಗಳ ಶಿಷ್ಯವೃತ್ತಿಯು ಏಳು ವರ್ಷಗಳಿಗಿಂತಲೂ ಹೆಚ್ಚಾಗಿತ್ತು. ಸಕಲ ಸದ್ಗ್ರಂಥಗಳೂ ಅವರಿಗೆ ಕರಗತವಾಗಿದ್ದವು.

ಇದೇ ಸಮಯಕ್ಕೆ ಕೊಪ್ರದ ನರಸಿಂಹ ಕ್ಷೇತ್ರಕ್ಕೆ ಸಂಚಾರ ಮಾಡಿಕೊಂಡು ಶ್ರೀ ರಘುನಾಥತೀರ್ಥರೆಂಬ ಮತ್ತೊಬ್ಬ ಯತಿಗಳು ಬಂದರು. ಶ್ರೀ ವಿಬುಧೇಂದ್ರತೀರ್ಥರ ಮತ್ತು ರಘುನಾಥತೀರ್ಥರ ಸಮಾಗಮ ಗಂಗಾ ಯಮುನಾ ನದಿಗಳ ಸಂಗಮದಂತೆ ಪರಿಶೋಭಿಸಿತು.ಶ್ರೀ ರಘುನಾಥತೀರ್ಥರೂ ಕೆಲವುದಿನ ಆ ಕ್ಷೇತ್ರದಲ್ಲಿಯೇ ನಿಂತರು.

ಈ ಕಾಲದಲ್ಲಿ ಒಂದು ವಿಚಿತ್ರ ಪ್ರಸಂಗ ನಡೆಯಿತು. ಇಂತಹ ಮೇಧಾವಿಗಳೂ, ಶಾಸ್ತ್ರಜ್ಞರೂ, ಹರಿಭಕ್ತರೂ, ಸೇರಿದಲ್ಲಿ ಶ್ರೀಹರಿಯ ಮಹಿಮೆಯಿಂದ ಕೂಡಿದ ಶಾಸ್ತ್ರವಿಚಾರವೇ ಮುಖ್ಯವಾಗಿರುತ್ತದೆ. ಬಾಲ ಸನ್ಯಾಸಿಗಳಾದ ಲಕ್ಷ್ಮೀನಾರಾಯಣ ಮುನಿಗಳೂ ಈ ಶಾಸ್ತ್ರಾರ್ಥದ ವಿಚಾರದಲ್ಲಿ

ಭಾಗವಹಿಸುತ್ತಿದ್ದರು.ಅವರ ಹರಿತವಾದ ಬುದ್ಧಿಯೂ, ಪಾಂಡಿತ್ಯವೂ, ವಿನಯಾದಿಸದ್ಗುಣಗಳೂ ಶ್ರೀ ರಘುನಾಥತೀರ್ಥರ ಮೆಚ್ಚಿಗೆಯನ್ನು ಪಡೆದಿದ್ದವು.

ಒಂದು ದಿನ ಶ್ರೀ ಮನ್ನ್ಯಾಯಸುಧಾ ಎಂಬ ಗ್ರಂಥದ ಕಠಿಣ ವಿಚಾರವೊಂದು ಚರ್ಚೆಗೆ ಬಂದಿತು. ಶ್ರೀ ವಿಬುಧೇಂದ್ರರು ಲಕ್ಷೀನಾರಾಯಣ ಮುನಿಗಳ ಮುಗುಳು ಮುಖವನ್ನೊಮ್ಮೆ ನೋಡಿದರು.

ಗುರುಗಳ ಮನೋಗತ ಭಾವವನ್ನರಿತ ಬಾಲಯತಿಗಳು , ಆ ಕಠಿಣವಿಷಯವನ್ನು ವಿವರಿಸಲು ಪ್ರಾರಂಭಿಸಿದರು. ಗಂಗಾ ಪ್ರವಾಹದಂತೆ ಮಾತು ಹೊರಹೊಮ್ಮಿತು. ವೇದಾದಿಗಳಿಂದ ಪ್ರಮಾಣಗಳನ್ನು ಉದಾಹರಿಸಿದರು. ಆ ಕಠಿಣ ವಿಷಯವನ್ನು ಅತಿ ಸುಲಭವಾಗಿ ಎಲ್ಲರಿಗೂ ಅರ್ಥವಾಗುವಂತೆ ಹೇಳಿದರು.

ಶ್ರೀ ರಘುನಾಥತೀರ್ಥರು ಬಾಲಯತಿಗಳ ಪ್ರಚಂಡ ಬುದ್ಧಿಯನ್ನು ನೋಡಿ ಹರ್ಷಿತರಾದರು. ಕಣ್ಣುಗಳಿಂದ ಆನಂದಬಾಷ್ಪಗಳು ಹರಿದವು. ಬಾಲಯತಿಗಳನ್ನು ತಮ್ಮ ಬಾಹುಗಳಿಂದ ಆಲಿಂಗಿಸಿಕೊಂಡು, ಮನಃ ಪೂರ್ವಕವಾಗಿ ಹೊಗಳಿದರು. ''ಲಕ್ಷ್ಮೀನಾರಾಯಣ ಯತಿಗಳೇ, ನಾವು ಶ್ರೀ ಪಾದರಾದರೆ ನೀವು ಶ್ರೀ ಪಾದರಾಜರು. ಈ ಬಿರುದು ನಿಮಗೆ ಶಾಶ್ವತವಾಗಲಿ ''ಎಂದುಹರಿಸಿದರು. ನೆರೆದ ಸಭಿಕರೆಲ್ಲರೂ ಹರ್ಷೋದ್ಗಾರ ಮಾಡಿದರು .ಅಂದಿನಿಂದ ಲಕ್ಷ್ಮೀನಾರಾಯಣ ಯತಿಗಳು ಶ್ರೀ ಪಾದರಾಜರೆಂದು ಪ್ರಸಿದ್ಧರಾದರು.

ಶ್ರೀ ಪಾದರಾಜರ ವಿದ್ಯಾಭ್ಯಾಸವು ಪೂರ್ಣವಾಯಿತು. ಗುರುಗಳಿಂದ ಅಪ್ಪಣೆ ಪಡೆದು ಸ್ವರ್ಣವರ್ಣತೀರ್ಥರ ಬಳಿಗೆ ಹಿಂತಿರುಗಿದರು.

ಸಕಲವಿದ್ಯಾಪಾರಂಗತರಾಗಿ ಹಿಂತಿರುಗಿದ ಶಿಷ್ಯನನ್ನು ಕಂಡು ಸ್ವರ್ಣವರ್ಣತೀರ್ಥರು ಸಂತುಷ್ಟರಾದರು. ಕೆಲವು ಕಾಲದ ಮೇಲೆ ಧರ್ಮ ಪ್ರಚಾರದ ಭಾರವನ್ನು ಶಿಷ್ಯರಾದ ಶ್ರೀ ಪಾದರಾಜರಿಗೆ ಒಪ್ಪಿಸಿ, ಸ್ವರ್ಣವರ್ಣತೀರ್ಥರು ಶ್ರೀ ರಂಗದಲ್ಲಿಯೇ ಬೃಂದಾವನಸ್ಥರಾದರು.

ಗುರುಗಳು ವೈಕುಂಠಯಾತ್ರೆ ಮಾಡಿದ ಮೇಲೆ ಶ್ರೀಪಾದರಾಜರು ದೇಶ ದೇಶಗಳಲ್ಲಿ ಧರ್ಮಪ್ರಚಾರವನ್ನು ಮಾಡುತ್ತಾ ಮುಳಬಾಗಿಲು ಎಂಬ ಕ್ಷೇತ್ರಕ್ಕೆ ಬಂದರು.

ಮುಳಬಾಗಿಲು ಅಂದಿನ ವಿಜಯನಗರದ ಅರಸರ ಪಾಲನೆಯಲ್ಲಿದ್ದು ಪ್ರಖ್ಯಾತವಾಗಿತ್ತು. ವಿಜಯನಗರ ಸಾಮ್ರಾಜ್ಯದ ಪೂರ್ವದ್ವಾರದಂತೆ ಇದ್ದುದರಿಂದ ( ಮೂಡಣ ಬಾಗಿಲು ) ಇದಕ್ಕೆ ಮುಳಬಾಗಿಲು ಎಂಬ ಹೆಸರು ಬಂದಿತ್ತು. ಇಲ್ಲಿ ಅಕ್ಷೋಭ್ಯತೀರ್ಥರೆಂಬ ಯತಿಶ್ರೇಷ್ಠರು. ಶ್ರೀ ನೃಸಿಂಹನನ್ನು ಪ್ರತಿಷ್ಠಿಸಿದ್ದರು. ಆದೇವಾಲಯದ ಪಕ್ಕದಲ್ಲಿಯೇ ಇದ್ದ ನೃಸಿಂಹತೀರ್ಥವು ಹೆಸರಿಗೆ ತಕ್ಕಂತೆ ಶುಭ ಪ್ರದವಾಗಿತ್ತು. ಇಲ್ಲಿ ಅರ್ಜುನನಿಂದ ಪ್ರತಿಷ್ಠಿಸಲ್ಪಟ್ಟ ಹನುಮಂತ ದೇವಾಲಯವಿದೆ. ಒಟ್ಟಾರೆ ಹೇಳುವುದಾದರೆ ಮುಳಬಾಗಿಲು ತಪೋವನವಾಗಿಯೂ ,ಪವಿತ್ರ ಕ್ಷೇತ್ರವಾಗಿಯೂ ಇತ್ತು.

ಈ ಎಲ್ಲಾ ಕಾರಣಗಳಿಂದ ಶ್ರೀಪಾದರಾಜರು ಮುಳಬಾಗಿಲನ್ನೇ ತಮ್ಮ ಪ್ರಧಾನ ಕೇಂದ್ರವನ್ನಾಗಿ ಮಾಡಿಕೊಂಡು ಅಲ್ಲೇ ನಿಂತರು.

ಒಮ್ಮೆ ಶ್ರೀ ಪಾದರಾಜರಿಗೆ ಗಂಗಾಸ್ನಾನ ಮಾಡಬೇಕೆಂದು ಮನಸ್ಸಾಯಿತು. ಅಂದು ರಾತ್ರಿ ಶ್ರೀಪಾದರಾಜರಿಗೆ ಶ್ರೀಪಾದರಾಜರಿಗೆ ಶ್ರೀಹರಿ ಕನಸ್ಸಿನಲ್ಲಿ ಬಂದು ,ಅಂದಿಗೆ ನಾಲ್ಕನೇ ದಿನದಲ್ಲಿ ಗಂಗೆಯೇ ಶ್ರೀ ನೃಸಿಂಹತೀರ್ಥದ ಪೂರ್ವಭಾಗದಲ್ಲಿ ಉದ್ಭವವಾಗುವಳೆಂದೂ, ಅವರು ಶಿಷ್ಯಕೋಟಿಯೊಂದಿಗೆ ಸ್ನಾನ ಮಾಡಬಹುದೆಂದೂ ಹೇಳಿದನು.

ಭಗವಂತನು ಭಕ್ತರ ಬಯಕೆಗಳನ್ನು ಪೂರೈಸುವ ಕಡು ಕರುಣಾಮಯನು.

ಸ್ವಪ್ನದಲ್ಲಿ ಶ್ರಿಹರಿ ಸೂಚಿಸಿದಂತೆ ನಾಲ್ಕನೇ ದಿನ ಗಂಗಾದೇವಿಯು ಝುಳ ಝುಳನೆ ಶ್ರೀ ನೃಸಿಂಹತೀರ್ಥದ ಪೂರ್ವಭಾಗದಲ್ಲಿ ಉದ್ಭವವಾದಳು. ಶ್ರೀ ಪಾದರಾಜರು ಅತ್ಯಂತ ಹರುಷದಿಂದ ಗಂಗಾಜಲದಲ್ಲಿ ಸ್ನಾನ ಮಾಡಿ,

ಗಂಗಾದೇವಿಗೆ ಮರದ ಬಾಗಿಣವನ್ನು ಕೊಟ್ಟರು. ಗಂಗಾದೇವಿಯು ಎಲ್ಲರೂನೋಡುತ್ತಿರುವಂತೆ ತನ್ನ ಕೈಗಳನ್ನು ನೀರಿನಿಂದ ಮೇಲೆತ್ತಿ ಯತಿಶಿರೋಮಣಿಗಳು ಕೊಟ್ಟ ಬಾಗಿಣವನ್ನು ಸ್ವೀಕರಿಸಿದಳು.

ಲೋಕ ಕಲ್ಯಾಣಕ್ಕಾಗಿ ಜೀವನವನ್ನು ಸಾಗಿಸುವ ಮಹಾತ್ಮರಿದ್ದಲ್ಲಿಗೆ ಗಂಗಾದಿ ಸಕಲ ತೀರ್ಥಗಳೂ ಹರಿದು ಬರುವವು. ಸಕಲ ದೇವತೆಗಳೂ ನಿರಂತರ ಅವರ ಬಳಿಯಲ್ಲಿ ವಾಸಮಾಡುವರು. ಎಲ್ಲಾ ನೀತಿಕಾರರೂ ಸಾಧು ಸಜ್ಜನರ ಮಹಿಮೆಯನ್ನು ಕೊಂಡಾಡುತ್ತಾ ಅವರ ಸಹವಾಸ ಎಲ್ಲರಿಗೂ ಕ್ಷೇಮವೆಂದು ಹೇಳಿರುವರು.

ಒಮ್ಮೆ ಒಬ್ಬ ಬ್ರಾಹ್ಮಣನಿಗೆ ಕಾಣಾಂತರಗಳಿಂದ ಬ್ರಹ್ಮಹತ್ಯಾದೋಷವು ಬಂದಿತು. ಅದರಿಂದ ಅವನಿಗೆ ಬಹಳ ಕಷ್ಟಗಳುಂಟಾದವು. ಮಾದಿದ ತಪ್ಪಿಗಾಗಿ ಬಹಳ ಪಶ್ಚಾತ್ತಾಪ ಪಟ್ಟನು. ಪಶ್ಚಾತ್ತಾಪ ಮಾನವನ ಮನಸ್ಸನ್ನು ಶುದ್ಧಗೊಳಿಸಿ, ಅವನ ಪಾಪಗಳನ್ನೆಲ್ಲಾ ಪರಿಹರಿಸುವುದು. ಹಾಗೆಂದ ಮಾತ್ರಕ್ಕೆ ಪುನಃ ಪುನಃ ತಪ್ಪುಗಳನ್ನು ಮಾಡುತ್ತಾ, ಪಶ್ಚಾತ್ತಾಪ ಪಟ್ಟೆನೆಂದು ಹೇಳಬಾರದು. ಅಂಥಾ ಪಶ್ಚಾತ್ತಾಪ ನಿಜವಾದ ಪಶ್ಚಾತ್ತಾಪವಾಗಲಾರದು. ಇದರಿಂದ ಭಗವಂತನ ಕ್ಷಮೆಯೂ ಸಹ ದೊರೆಯಲಾರದು.

ಬ್ರಾಹ್ಮಣನು ಶ್ರೀ ಪಾದರಾಜರ ಬಳಿಗೆ ಬಂದು ತನ್ನನ್ನು ಬ್ರಹ್ಮಹತ್ಯಾದೋಷದಿಂದ ಉದ್ಧಾರ ಮಾಡಬೇಕೆಂದು ಬೇಡಿಕೊಂಡನು. ಶ್ರೀಪಾದರಾಜರಿಗೆ ಪಶ್ಚಾತ್ತಾಪದಿಂದ ಪೂತನಾದ ಅವನಲ್ಲಿ ಕರುಣೆಯುಂಟಾಯಿತು. ಅವನನ್ನು ತಮ್ಮ ಪೂಜಾಕಾಲದಲ್ಲಿ ಬರುವಂತೆ ಹೇಳಿದರು. ಅವನು ಹಾಗೆಯೇ ಭಕ್ತಿಯಿಂದ ಸನ್ನಿಧಿಯಲ್ಲಿ ಬಂದು ಕುಳಿತನು. ಶ್ರೀ ಪಾದರಾಜರು ಶ್ರೀಹರಿಯನ್ನು ಸ್ಮರಿಸುತ್ತಾ ಬ್ರಾಹ್ಮಣನ ಮೇಲೆ ಶಂಖೋದಕವನ್ನು ಪ್ರೋಕ್ಷಿಸಿದರು.

ಇದರಿಂದ ಅವನ ಬ್ರಹ್ಮಹತ್ಯಾ ದೋಷವು ದೂರವಾಯಿತು . ಬ್ರಾಹ್ಮಣನಿಗೆ ಆದ ಸಂತೋಷಕ್ಕೆ ಪಾರವಿಲ್ಲ .ಇಂತಹುದೇ ಮತ್ತೊಂದು ಸಂಘಟನೆಯೂ ನಡೆಯಿತು.

ಸಾಳುವ ನರಸಿಂಹರಾಯನೆಂಬ ಮಾಹಾವೀರನು ಅಂದಿನ ವಿಜಯನಗರ ಸಮ್ರಾಜ್ಯಕ್ಕೆ ಮುಖ್ಯ ಸೇನಾನಿಯು. ಈತನು ಪೆನುಗೊಂಡೆಯು ರಾಜನಾಗಿ ನಿಯಮಿತನಾಗಿದ್ದನು.

ಈತನಿಗೆ ಒಮ್ಮೆ ಭಯಂಕರವಾದ ಬ್ರಹ್ಮಹತ್ಯಾದೋಷವು ಬಂದು ಸೇರಿತು. ದೋಷದಿಂದ ಕಳೆಗುಂದಿದ ರಾಜನು ಚಿಂತೆಗೊಳಗಾದನು. ತನ್ನ ಕುಲದೈವನಾದ ಶ್ರೀ ನಿವಾಸನಲ್ಲಿ ಮೊರೆ ಇಟ್ಟನು.

ಮಾಡಿದ ತಪ್ಪನ್ನು ನೆನೆದು ಪಶ್ಚಾತ್ತಾಪ ಪಡುವ ವ್ಯಕ್ತಿಯಲ್ಲಿ ಭಗವಂತನು ಕರುಣೆ ತೋರುತ್ತಾನೆ. ಕರುಣಾಸಮುದ್ರನಾದ ಶ್ರೀನಿವಾಸನು ಸಾಳುವ ನರಸಿಂಹರಾಯನಿಗೆ ಶ್ರೀಪಾದರಾಜರಲ್ಲಿ ಶರಣು ಹೋಗುವಂತೆ ಸ್ವಪ್ನದಲ್ಲಿ ಸೂಚಿಸಿದನು. ಸಂತಸಗೊಂಡ ರಾಜನು ಶ್ರೀಪಾದರಾಜರಲ್ಲಿಗೆ ಬಂದು ತನ್ನನ್ನು ಪಾಪದಿಂದ ಮುಕ್ತನನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದನು.

ಶ್ರೀಪಾದರಾಜರು ಶ್ರೀನಿವಾಸನನ್ನು ಪ್ರಾರ್ಥಿಸುತ್ತಾ ತಮ್ಮ ತಪಃಶಕ್ತಿಯಿಂದ ರಾಜನ ಪಾಪವನ್ನು ಕಳೆದರು.

ನರಸಿಂಹರಾಯನು ಕೃತಜ್ಞತೆಯಿಂದ ಶಿರಬಾಗಿದನು. ಅವರಲ್ಲಿ ಅತ್ಯಂತ ಭಕ್ತಿಯುಂಟಾಗಿ ಶ್ರೀ ಪಾದರಾಜರ ದಾಸಾನುದಾಸನಾದನು.

ತಾನು ಸಿಂಹಾಸನಾರೋಹಣ ಮಾಡುವ ಮೊದಲು ಶ್ರೀಪಾದರಾಜರನ್ನೇ ತನ್ನ ಸಿಂಹಾಸನದ ಮೇಲೆ ಕುಳ್ಳಿರಿಸಿ ಅವರಿಗೆ ಕನಕಾಭಿಷೇಕವನ್ನು ಮಾಡಬೇಕೆಂದು ನಿಶ್ಚಯಿಸಿದನು. ಈತನ ಮನೋಗತ ಅಭಿಲಾಷೆಯನ್ನು ಈಡೇರಿಸಿ ಕೊಡಬೇಕೆಂದು ಶ್ರೀ ಪಾದರಾಜರಲ್ಲಿ ಬೇಡಿದನು. ಶ್ರೀಹರಿಯ ಸಂಕಲ್ಪವನ್ನುತಿಳಿದ ಶ್ರೀಪಾದರಾಜರು, ಯಾವ ಮನೋವಿಕಾರಕ್ಕೂ ಒಳಗಾಗದೆ ಅದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿದರು.

ಸಾಳುವ ನರಸಿಂಹನು ಅತ್ಯಂತ ವೈಭವದಿಂದ ಶ್ರೀಪಾದರಾಜರನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ , ಕನಕಾಭಿಷೇಕವನ್ನು ಮಾಡಿ ಧನ್ಯನಾದನು.

ಒಮ್ಮೆ ಶ್ರೀಪಾದರಾಜರು ಸಂಚಾರ ಮಾಡುತ್ತಾ ಹಾದಿ ತಪ್ಪಿ ಶಿಷ್ಯರಿಂದ ಕೂಡಿಕೊಂಡು ಒಂದು ಅಡವಿಯ ಮಧ್ಯಕ್ಕೆ ಬಂದರು. ಅಷ್ಟು ಹೊತ್ತಿಗಾಗಲೇ ಮಧ್ಯಾಹ್ನ ವಾಗಿತ್ತು. ಉರಿ ಬಿಸಿಲು. ಎಲ್ಲಿಯೂ ಇಳಿದುಕೊಳ್ಳಲು ಸರಿಯಾದ ಸ್ಥಳವಿರಲಿಲ್ಲ. ಶ್ರೀ ಪಾದರಾಜರ ಪರಿವಾರದವರು ಭಯದಿಂದ ವಿಹ್ವಲರಾದರು. ಶ್ರೀಪಾದರಾಜರು ಮಾತ್ರ ಹಸನ್ಮುಖಿಗಳಾಗಿಯೇ ಒಂದು ಮರದ ಕೆಳಗೆ ಹೋಗಿ ಕುಳಿತು ಶ್ರೀಹರಿಧ್ಯಾನದಲ್ಲಿ ಮಗ್ನರಾದರು. ಸ್ವಲ್ಪ ಸಮಯವಾಯಿತು. ಇದ್ದಕ್ಕಿದ್ದಂತೆಯೇ ಒಬ್ಬ ವರ್ತಕನು ತನ್ನ ಪರಿವಾರದೊಂದಿಗೆ ಆ ಸ್ಥಳಕ್ಕೆ ಬಂದನು. ಶ್ರೀಪಾದರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ''ಶ್ರೀಗಳು ಇಂದು ಇಲ್ಲೇ ನನ್ನ ಭಿಕ್ಷೆಯನ್ನು ಸ್ವೀಕರಿಸಿ ಉದ್ಧಾರ ಮಾಡಬೇಕು''ಎಂದನು. ''ಶ್ರೀನಿವಾಸನ ಚಿತ್ತ, ಆಗಬಹುದು ''ಎಂದರು ಶ್ರೀಪಾದರಾಜರು.

ಆ ವೈಶ್ಯನು ಶ್ರೀನಿವಾಸನ ಬ್ರಹ್ಮೋತ್ಸವದಲ್ಲಿ ಅಂಗಡಿ ಇಡಲು ಸಕಲ ಪದಾರ್ಥಗಳೊಡನೆ ಹೋಗುತ್ತಿದ್ದನು. ಪರಿವಾರದವರೊಂದಿಗೆ ಪ್ರಯಾಣ ಮಾಡುತ್ತಿದ್ದ ವರ್ತಕನು, ಹಿಂದಿನ ದಿನದ ಸಯಂಕಾಲದ ಹೊತ್ತಿಗೆ ಕಾಡಿನ ಮಧ್ಯಕ್ಕೆ ಬಂದು ಸಿಕ್ಕಿಹಾಕಿಕೊಂಡನು . ರಾತ್ರಿಯಾಗುತ್ತಾ ಬಂದುದರಿಂದಪ್ರಯಾಣ ಮುಂದುವರಿಸುವುನು ಕಷ್ಟವಾಯಿತು. ಶ್ರೀನಿವಾಸನ ಮೇಲೆ ಭಾರಹಾಕಿ ಆ ರಾತ್ರಿಯನ್ನು ಅಡವಿಯ ಮಧ್ಯದಲ್ಲಿ ಕಳೆಯಲು ಸಿದ್ಧನಾದನು .ಕಳ್ಳರಭಯ ವರ್ತಕನನ್ನು ಆವರಿಸಿತ್ತು. ಇದರಿಂದಾಗಿ ರಾತ್ರಿಯೆಲ್ಲಾ ನಿದ್ರೆ ಇಲ್ಲದಾಯಿತು. ಬೆಳಗಿನ ಝಾವದಲ್ಲಿ ಆಗತಾನೇ ಕಣ್ಣು ಮುಚ್ಚುತ್ತಿದ್ದ ವೈಶ್ಯನಿಗೆ ಒಂದು ಕನಸಾಯಿತು. ಕನಸಿನಲ್ಲಿ ಶ್ರೀ ನಿವಾಸನು ಕಾಣಿಸಿಕೊಂಡನು. ''ಶ್ರೀಪಾದರಾಜರೆಂಬ ಯತಿ ಶಿರೋಮಣಿಗಳು ನಾಳೆಯದಿನ ಈ ಕಾಡಿಗೆ ಪರಿವಾರ ಸಹಿತರಾಗಿ ಬರುವರು. ಅವರಿಗೆ ಭಿಕ್ಷೆಯನ್ನು ಮಾಡಿಸು. ನಾನು ಪ್ರೀತನಾಗುತ್ತೇನೆ'' ಎಂದು ಹೇಳಿದನು.

ಎಚ್ಚರಗೊಂಡ ವೈಶ್ಯನಿಗೆ ಮೈಪುಳಕವಾಯಿತು. ಶ್ರೀ ನಿವಾಸನ ಆಜ್ಞೆಯಂತೆ ವರ್ತಕನು ಶ್ರೀಪಾದರಾಜರನ್ನು ಹುಡುಕುತ್ತಾ ಕೊನೆಗೆ ಅವರಿರುವಜಾಗಕ್ಕೆ ಬಂದು ಸೇರಿದನು.

ವರ್ತಕನು ನಡೆದ ಎಲ್ಲಾ ವೃತ್ತಾಂತವನ್ನೂ ಶ್ರೀಪಾದರಾಜರಿಗೆ ವಿವರಿಸಿದನು. ಶ್ರೀಪಾದರಾಜರು ಶ್ರೀಹರಿಯ ಭಕ್ತವಾತ್ಸಲ್ಯತೆಯನ್ನು ಮನಸಾಸ್ಮರಿಸಿದರು.

ಶ್ರೀ ಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ:-

'' ಅನನ್ಯಾಶ್ಚಿಂತಯಂತೋಮಾಂ
ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಂ ''

ಎಂದು ಹೇಳಿ ಯಾರು ಅನನ್ಯಮನಸ್ಕರಾಗಿ ನನ್ನನ್ನೇ ನಂಬುವರೋ ಅಂಥವರಿಗೆ ಬೇಕಾಗುವ ಸಕಲ ಸೌಕರ್ಯಗಳನ್ನೂ ಒದಗಿಸಿ ಕೊಡುತ್ತೇನೆ ಎಂದು ಅಭಯವನ್ನಿತ್ತಿರುವನು.

ಮನಸಾ ಶ್ರೀಹರಿಯನ್ನೇ ನಂಬಿದ ಶ್ರೀಪಾದರಾಜರ ವಿಷಯದಲ್ಲಿ ನಡೆದ ಈ ಸಂಘಟನೆಯು ಶ್ರೀ ಕೃಷ್ಣನ ವಾಕ್ಯವನ್ನು ಜ್ಞಾಪಕಕ್ಕೆ ತರುವುದು.

ಶ್ರೀ ಪಾದರಾಜರು ಆ ಅಡವಿಯಲ್ಲಿಯೇ ಶ್ರೀ ರಂಗವಿಠಲ ದೇವರ ಪೂಜೆಯನ್ನು ಅತಿ ವಿಜೃಂಭಣೆಯಿಂದ ಮಾಡಿದರು. ಪೂಜೆ ಮುಗಿಯುವ ಹೊತ್ತಿಗೆ ಭಕ್ಷ್ಯಭೋಜ್ಯಾದಿ ವಿವಿಧ ಆಹಾರಗಳು ತಯಾರವು. ದೇವರಿಗೆ ನೈವೇದ್ಯವಾಯಿತು. ಎಲ್ಲರಿಗೂ ಮೃಷ್ಟಾನ್ನ ಭೋಜನವಾಯಿತು.

ಹೀಗೆ ಶ್ರೀಪಾದರಾಜರು ಇಡೀ ಭಾರತ ದೇಶದಲ್ಲೆಲ್ಲಾ ಸಂಚಾರ ಮಾಡುತ್ತಾ ತಮ್ಮ ನಡೆ ನುಡಿಗಳಿಂದ ಜನರಿಗೆ ಉಪದೇಶವನ್ನು ನೀಡಿದರು.ಕೊನೆಗೆ ತಮ್ಮ ಸ್ವಸ್ಥಾನವಾದ ಮುಳಬಾಗಿಲಿಗೆ ಬಂದು ನೆಲೆಸಿದರು.

ದೇಶದ ಅನೇಕ ಕಡೆಗಳಿಂದ ವಿದ್ಯಾರ್ಥಿಗಳು ಶ್ರೀಪಾದರಾಜರಲ್ಲಿಗೆ ಬರುತ್ತಿದ್ದರು. ಸ್ವಲ್ಪಕಾಲದಲ್ಲಿಯೇ ಮುಳಬಾಗಿಲು ಪ್ರಖ್ಯಾತ ವಿದ್ಯಾಕೇಂದ್ರವಾಯಿತು. ಈ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀಪಾದರಾಜರು. ವಿದ್ಯಾರ್ಥಿಗಳಿಗೆ ನಿಜ ತತ್ವಗಳನ್ನು ಬೋಧಿಸುತ್ತಿದ್ದರು. ಅಲ್ಲಿ ಅತ್ಯುಚ್ಚಮಟ್ಟದ ವಿದ್ಯಾಭ್ಯಾಸವು ಜ್ಞಾನಾರ್ಥಿಗಳಿಗೆ ದೊರೆಯುತ್ತಿತ್ತು.

ಶ್ರೀ ಪಾದರಾಜರಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕ ಶಿಷ್ಯರಲ್ಲಿ ಶ್ರೀ ವ್ಯಾಸರಾಯರು ಒಬ್ಬರು. ವ್ಯಾಸರಾಯರು ಶ್ರೀ ಪಾದರಾಜರ ಆಜ್ಞೆಯಂತೆ ತಿರುಮೇಶನಾದ ಶ್ರೀನಿವಾಸನನ್ನು ಹನ್ನೆರಡು ವರ್ಷಗಳ ಕಾಲ ಪೂಜಿಸಿದರು. ಅದೇ ಗುರುಗಳ ಅನುಗ್ರಹ ಬಲದಿಂದ ವಿಜಯನಗರ ಸಮ್ರಾಜ್ಯಾಧಿಪತಿಯಾದ ಕೃಷ್ಣ ದೇವರಾಯನಿಗೆ ಬಂದ ಕುಹು ಯೋಗವನ್ನು ಪರಿಹರಿಸಿದರು.

ವ್ಯಾಸರಾಯರ ಎಲ್ಲಾ ಘನತೆಗಳೂ ಶ್ರೀಪಾದರಾಜರ ಮಹಿಮೆಯನ್ನೇ ಪ್ರಕಟಿಸುತ್ತವೆ.

ಶ್ರೀಪಾದರಾಜರು ತಮ್ಮ ಜೀವಿತ ಕಾಲದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಆದರೆ ಈಗ ದೊರೆಯುತ್ತಿರುವುದು ''ವಾಗ್ವಜ್ರ '' ವೆಂಬ ಸಂಸ್ಕೃತ ಗ್ರಂಥ ಮಾತ್ರ, ಇದಲ್ಲದೆ ಸಂಸ್ಕೃತ ಜ್ಞಾನವಿಲ್ಲದ ಸಾಮಾನ್ಯ ಜನರಿಗೆ ವೇದವೇದಾಂತಗಳ ರಹಸ್ಯಗಳನ್ನು ತಿಳಿಸುವ ಸದಿಚ್ಛೆಯಿಂದ, ರಂಗವಿಠಲ ಎಂಬ ಅಂಕಿತದಿಂದ ಕನ್ನಡದಲ್ಲಿ ಅನೇಕ ಪದ -ಪದ್ಯ- ಸುಳಾದಿ ಉಗಾಭೋಗಗಳನ್ನು ರಚಿಸಿರುವರು.

ಒಮ್ಮೆ ಶ್ರೀಪಾದರಾಜರು ತಮ್ಮ ಶಿಷ್ಯರಿಗೆಲ್ಲಾ ಪಾಠ ಹೇಳುತ್ತಿದ್ದರು. ಇದ್ದಕ್ಕಿದ್ದ ಹಾಗೆಯೇ ಆಕಾಶದಿಂದ ಒಂದು ಪರಿಮಳ ಪುಷ್ಪವು ಅವರ ಮುಂದೆ ಬಿದ್ದಿತು. ತಲೆ ಎತ್ತಿ ಮೇಲೆ ನೋಡಿದರು. ಆಕಾಶ ಮಾರ್ಗದಲ್ಲಿ ಶ್ರೀ ರಘುನಾಥತೀರ್ಥರು ವೈಕುಂಠದತ್ತ ಹೋಗುತ್ತಿದ್ದರು. ಅವರು ಮಳಖೇಡವೆಂಬ ಕ್ಷೇತ್ರದಲ್ಲಿ ಆಗತಾನೇ ಬೃಂದಾವನಸ್ಥರಾಗಿದ್ದರು.

ಭೂಮಿಯಲ್ಲಿದ್ದ ಶ್ರೀಪಾದರಾಜರಿಗೂ ಆಕಾಶ ಮಾರ್ಗವಾಗಿ ಶ್ರೀಹರಿ ಮಂದಿರದತ್ತ ಸಾಗುತ್ತಿದ್ದ ರಘುನಾಥ ಯತಿಗಳಿಗೂ ಪರಸ್ಪರ ಸಂಭಾಷಣೆ ನಡೆಯಿತು. ಸುತ್ತಲೂ ನೆರೆದ ಶಿಷ್ಯರಿಗೆ ಶ್ರೀಪಾದರಾಜರು ಆಕಾಶದತ್ತ ನೋಡುತ್ತಾ ಸೌಜ್ಞೆಗಳನ್ನು ಮಾಡುತ್ತಿರುವುದು ಮಾತ್ರ ಕಾಣಿಸುತ್ತಿದೆ. ಆಕಾಶದಲ್ಲಿ ಅವರಿಗೆ ಏನೂ ಕಾಣಿಸಲಿಲ್ಲ. ಶಿಷ್ಯರಿಗೆ ಆಶ್ಚರ್ಯವಾಯಿತು.

ಆಗ ಅವರು ವಿನಮ್ರರಾಗಿ ಶ್ರೀಪಾದರಾಜರನ್ನು ಕುರಿತು,''ಗುರುಗಳೇ ತಾವು ಆಕಾಶದತ್ತ ನೋಡುತ್ತಾ ಯಾರೊಡನೆಯೋ ಮಾತಾಡಿದಂತೆ ತೋರಿತು. ಇದರ ರಹಸ್ಯವೇನು ? '' ಎಂದು ಪ್ರಶ್ನಿಸಿದರು. ಆಗ ಶ್ರೀಪಾದರಾಜರು ರಘುನಾಥತೀರ್ಥರು ವೈಕುಂಠಯಾತ್ರೆಯನ್ನು ಮಾಡಿದ ವಿಷಯವನ್ನು ತಿಳಿಸುತ್ತಾ, ಇನ್ನು ಎರಡು ವರ್ಷಗಳು ,ಆರುತಿಂಗಳಿಗೆ ತಾವೂ ಸಹ ಇಹಲೋಕದ ಯಾತ್ರೆಯನ್ನು ಮುಗಿಸಿ ಪರಲೋಕಕ್ಕೆ ತೆರಳುವುದಾಗಿ ತಿಳಿಸಿದರು.

ಶ್ರೀಪಾದರಾಜರು ಅಂದಿನಿಂದ ತಮ್ಮ ಉಳಿದ ಜೀವಿತ ಕಾಲವನ್ನು ಶ್ರೀಹರಿ ಪಾದಪದ್ಮಚಿಂತನೆಯಲ್ಲಿಯೇ ಕಳೆಯ ತೊಡಗಿದರು. ಧ್ಯಾನಮಗ್ನರಾಗಿ ಬಹಳ ಸಮಯದವರೆಗೆ ಕುಳಿತುಬಿಡುತ್ತಿದ್ದರು. ಅವರ ಶರೀರದ ಕಾಂತಿಯು ದಿನದಿನಕ್ಕೆ ಅತಿಶಯವಾಗಹತ್ತಿತು. ಮುಖದ ತೇಜಸ್ಸು ಉಜ್ವಲವಾಯಿತು. ಕಣ್ಣುಗಳು ಪ್ರಫುಲ್ಲವಾಗಿ ಶಾಂತರಸದ ತೌರುಮನೆಯಂತೆ ಹೊಳೆಯಲಾರಂಭಿಸಿದವು. ಬಾಯಿಂದ ಹೊರಡುವ ಮಾತುಗಳು ಮುಕ್ತಾಫಲಗಳಾದವು. ಜನರಿಗೆ ಅವರ ದರ್ಶನವೇ ಒಂದು ಸೌಭಾಗ್ಯವಾಗಿದ್ದಿತ್ತು.

ಅಂದು ಜ್ಯೇಷ್ಟ ಶುದ್ಧ ಚತುರ್ಥೀ ದಿವಸದ ಉಷಃಕಾಲ ಶ್ರೀಪಾದರಾಜರು ನೃಸಿಂಹತೀರ್ಥದಲ್ಲಿ ಸ್ನಾನ ಮಾಡಿದರು. ನಿತ್ಯ ಕರ್ಮಾನುಷ್ಠಾನಗಳನ್ನೆಲ್ಲಾ ಮಾಡಿ ಮುಗಿಸಿದರು. ಜನತಂಡವು ನೃಸಿಂಹಕ್ಷೇತ್ರದ ಬಳಿ ಅಪಾರವಾಗಿ ಸೇರಿದ್ದಿತು. ನೆರೆದ ಜನಸಮೂಹಕ್ಕೆ ಹಿತೋಪದೇಶವನ್ನು ಮಾಡಿದರು.

ಭಕ್ತವೃಂದವು ನೋಡುತ್ತಿದ್ದಂತೆ ಶ್ರೀಪಾದರಾಜರು ಶ್ರೀಹರಿಯನ್ನು ಧ್ಯಾನಿಸುತ್ತಾ ಕಣ್ಣುಗಳನ್ನು ಮುಚ್ಚಿದರು. ಮಂಗಳವಾದ್ಯಘೋಷಗಳು ಸರ್ವತ್ರಮೊಳಗಿದವು. ಶಿಷ್ಯರೆಲ್ಲರೂ ಗುರುಗಳ ಆದೇಶದಂತೆ , ಅವರನ್ನು ಸ್ಮರಿಸುತ್ತಾ, ಅವರ ಮೇಲೆ ಬೃಂದಾವನವನ್ನು ನಿರ್ಮಿಸಿದರು. ಬೃಂದಾವನದಿಂದ ಒಂದು ದಿವ್ಯಜ್ಯೋತಿಯು ಹೊರಟು ಆಕಾಶದತ್ತ ಸಾಗಿತು. ಜನರೆಲ್ಲರೂ ಭಕ್ತಿ ಪರವಶರಾಗಿ, ಮುಕ್ತಕಂಠದಿಂದ ''ಶ್ರೀಪಾದರಾಜಗುರುವೇ ನಮಃ ನಮಃ ಶ್ರೀ ಪಾದರಾಜಾಯ'' ಎಂದು ಕೂಗಿದರು.

|| ಶ್ರೀಪಾದರಾಜಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ||

ಋಣ:- ಮಕ್ಕಳಿಗಾಗಿ ಶ್ರೀಶ್ರೀಪಾದರಾಜರು ಪುಸ್ತಕ
ಟಿ.ಟಿ.ಡಿ. ತಿರುಪತಿ.
ಗಣಕೀಕರಣ:- ಚಿ|| ಕೃಷ್ಣ